## ಸೆಲೆಬ್ರಿಟಿ

■ ಹನಿ

# ಅದ್ವಿತೀಯ ಕ್ಯಾಪ್ಟನ್



ಕ್ಯಾಪ್ಟನ್ ಲಕ್ಷ್ಮೀ ಸೆಹಗಲ್ 97ರ ಇಳಿವಯಸ್ಸಿನಲ್ಲಿ ಬದುಕಿಗೆ ವಿದಾಯ ಹೇಳಿದ್ದಾರೆ. ಹರೆಯದಿಂದಲೇ 'ಕ್ಯಾಪ್ಟನ್' ಎನ್ನುವುದು ಅವರ ಹೆಸರಿನೊಂದಿಗೆ ತಳುಕು ಹಾಕಿಕೊಂಡಿತ್ತು. ಸತ್ತ ಬಳಿಕವೂ ನೈಜ ಕ್ಯಾಪ್ಟನ್‌ನಂತೆ ತಮ್ಮ ಕಣ್ಣುಗಳನ್ನು ಮತ್ತು ದೇಹವನ್ನು ಅವರು ಮೆಡಿಕಲ್ ಕಾಲೇಜಿಗೆ ದಾನ ಮಾಡಿದ್ದಾರೆ.

ತಂದೆ ಎಸ್.ಸ್ವಾಮಿನಾಥನ್ ಚೆನ್ನೈನಲ್ಲಿ ಪ್ರತಿಭಾವಂತ ವಕೀಲರು. ತಾಯಿ ಎ.ವಿ.ಅಮ್ಮುಕುಟ್ಟಿ, ಸಾಮಾಜಿಕ ಕಾರ್ಯಕರ್ತೆ ಮಾತ್ರವಲ್ಲ, ಸ್ವಾತಂತ್ರ್ಯ ಚಳವಳಿಯಲ್ಲೂ ಸಕ್ರಿಯರಾಗಿದ್ದವರು. ಚಿಕ್ಕಂದಿನಲ್ಲೇ ಈ ಪ್ರಭಾವ ಲಕ್ಷ್ಮೀ ಮೇಲಿತ್ತು. ಲಕ್ಷ್ಮೀ ಚಿಕ್ಕ ಮಗುವಾಗಿದ್ದಾಗ ಒಮ್ಮೆ ತಾಯಿ ಅಮ್ಮುಕುಟ್ಟಿ ಮಗುವಿನ ಕೋಣೆಗೆ ನುಗ್ಗಿ ಮಗುವಿನ ಎಲ್ಲ ಬಟ್ಟೆಗಳನ್ನೂ ಒಟ್ಟು ಸೇರಿಸಿ ಅಂಗಳಕ್ಕೆ ಒಯ್ದು ಬೆಂಕಿ ಹಚ್ಚಿದರಂತೆ. ಅದು ಗಾಂಧೀಜಿ ನೀಡಿದ ಸ್ವದೇಶಿ ಆಂದೋಲನದ ಕರೆಗೆ ಪ್ರತಿಕ್ರಿಯೆ! ಕೇರಳದಲ್ಲಿ ಅಜ್ಜಿಯ ಮನೆಯಲ್ಲಿ ಬಾಲ್ಯ ಕಳೆಯುತ್ತಿದ್ದಾಗಲೇ ಸ್ಥಳೀಯ ಜಾತಿಪದ್ಧತಿಯ ವಿರುದ್ಧ ಬಂಡಾಯ ಪ್ರದರ್ಶಿಸಿದವರು ಲಕ್ಷ್ಮೀ. ಮನೆಯ ಹಿಂಭಾಗದಲ್ಲಿ ಕಾಡಿನಲ್ಲಿದ್ದ ಕೆಳಜಾತಿಯ ಆದಿವಾಸಿ ಮಕ್ಕಳನ್ನು ತಬ್ಬಿಕೊಂಡು ಆಟವಾಡಿದ್ದನ್ನು ನೋಡಿ ಊರವರು ಅಚ್ಚರಿ ಪಟ್ಟಿದ್ದರಂತೆ.

ಸೋಶಲಿಸ್ಟ್ ಚಳವಳಿಯಲ್ಲಿ ಸಕ್ರಿಯವಾಗಿದ್ದ ಲಕ್ಷ್ಮೀ ಸ್ವಾಮಿನಾಥನ್, ಮದ್ರಾಸ್ ಮೆಡಿಕಲ್ ಕಾಲೇಜಿನಲ್ಲಿ 1938ರಲ್ಲಿ ವೈದ್ಯ ಶಿಕ್ಷಣ ಮುಗಿಸಿ, 26ರ ಹರೆಯದಲ್ಲಿ ಸಿಂಗಾಪುರಕ್ಕೆ ತೆರಳಿದರು. ಲಕ್ಷ್ಮೀಯವರ ಜೀವನದ ಅತಿದೊಡ್ಡ ತಿರುವು ಸಂಭವಿಸಿದ್ದು ಅಲ್ಲಿ ಸುಭಾಶ್‌ಚಂದ್ರ ಬೋಸ್‌ರನ್ನು ಭೇಟಿಯಾದಾಗ. ಐದು ಗಂಟೆಗಳ ಸುದೀರ್ಘ ಚರ್ಚೆಯ ಬಳಿಕ ಲಕ್ಷ್ಮೀ ನೇತೃತ್ವದಲ್ಲಿ ಇಂಡಿಯನ್ ನ್ಯಾಷನಲ್ ಆರ್ಮಿಯ (ಐಎನ್‌ಎ) ಮಹಿಳಾ ವಿಭಾಗದ ಸ್ಥಾಪನೆಗೆ ನಿರ್ಧರಿಸಿದರು ಬೋಸ್. ಹಾಗೆ ಸ್ಥಾಪನೆಯಾದ ಝಾನ್ಸಿ ರಾಣಿ ರೆಜಿಮೆಂಟಿಗೆ ಕ್ಯಾಪ್ಟನ್ ಆದವರು, ಅಲ್ಲಿಂದೀಚೆಗೆ 'ಕ್ಯಾಪ್ಟನ್ ಲಕ್ಷ್ಮೀ' ಎಂದೇ ಖ್ಯಾತಿ ಹೊಂದಿದರು.

1944ರ ಡಿಸೆಂಬರ್‌ನಲ್ಲಿ 'ಬರ್ಮಾ ಮಾರ್ಚ್' ಶುರುವಾಯಿತು. 45ರ ಮೇ ತಿಂಗಳಲ್ಲಿ ಬ್ರಿಟಿಷರು ಕ್ಯಾಪ್ಟನ್ ಲಕ್ಷ್ಮೀಯನ್ನು ಬಂಧಿಸಿದರು. ಬಳಿಕ 11 ತಿಂಗಳ ಕಾಲ ಬರ್ಮಾದ ಕಾಡಿನಲ್ಲಿ ಗೃಹಬಂಧನ. ದೆಹಲಿಯಲ್ಲಿ ಐಎನ್‌ಎ ನಾಯಕರ ವಿಚಾರಣೆ ನಡೆಸುವ ವೇಳೆಗೆ ಲಕ್ಷ್ಮೀ ಅವರನ್ನೂ ಭಾರತಕ್ಕೆ ಕಳುಹಿಸಲಾಯಿತು. ಈ ಮಧ್ಯೆ ಐಎನ್‌ಎ ನಲ್ಲಿದ್ದ ಕರ್ನಲ್ ಪ್ರೇಂ ಕುಮಾರ್ ಸೆಹಗಲ್‌ರನ್ನು ಮದುವೆಯಾದರು. ಆದರೆ ಸಾಮಾಜಿಕ ಚಳವಳಿಯನ್ನು ಬಿಡಲಿಲ್ಲ. ದಲಿತರ ದೇವಾಲಯ ಪ್ರವೇಶ, ಬಾಲ್ಯ ವಿವಾಹ ಮತ್ತು ವರದಕ್ಷಿಣೆ ವಿರೋಧಿ ಚಳವಳಿಗಳಲ್ಲಿ ತೊಡಗಿಸಿಕೊಂಡರು. ದೇಶ ವಿಭಜನೆಯ ಬಳಿಕದ ಹಿಂದೂ–ಮುಸ್ಲಿಂ ಗಲಭೆಗಳ ನಿರಾಶ್ರಿತ ಸಂತ್ರಸ್ತರಿಗೆ ವೈದ್ಯಕೀಯ ನೆರವು ನೀಡುವ ತುರ್ತು. 70ರಲ್ಲಿ ಕಾಂಗ್ರೆಸ್ ತೊರೆದು ಸಿಪಿಎಂ ಪಕ್ಷ ಸೇರಿದಾಗ ಕ್ಯಾಪ್ಟನ್‌ಗೆ 57ರ ಹರೆಯ. 84ರಲ್ಲಿ ನಡೆದ ಭೋಪಾಲ್ ದುರಂತದ ಸಂತ್ರಸ್ತರ ನೆರವಿಗೆ ಧಾವಿಸಿದರು. ಅದೇ ವರ್ಷ ಇಂದಿರಾ ಹತ್ಯೆಯ ಬಳಿಕ ನಡೆದ ಹಿಂದೂ–ಸಿಖ್ ಗಲಭೆಗಳ ಸಂತ್ರಸ್ತರಿಗೆ ನೆರವು ಒದಗಿಸಲು ಕಾನ್ಪುರದಲ್ಲಿ ಶಿಬಿರಗಳನ್ನು ತೆರೆದರು. 96ರಲ್ಲಿ ಬೆಂಗಳೂರಿನಲ್ಲಿ ನಡೆದ ವಿಶ್ವಸುಂದರಿ ಸ್ಪರ್ಧೆಯನ್ನು ಪ್ರತಿಭಟಿಸಿ ಕ್ಯಾಪ್ಟನ್ ಪೊಲೀಸರ ಬಂಧನಕ್ಕೆ ಒಳಗಾಗಿದ್ದರು.

2002ರಲ್ಲಿ ಎಪಿಜೆ ಕಲಾಂ ವಿರುದ್ಧ ಎಡಪಕ್ಷಗಳ ಅಭ್ಯರ್ಥಿಯಾಗಿ ರಾಷ್ಟ್ರಪತಿ ಹುದ್ದೆಯ ಸ್ಪರ್ಧೆಗೆ ಇಳಿದಾಗ ಕ್ಯಾಪ್ಟನ್ ಮತ್ತೆ ಸುದ್ದಿಯಾದರು. ಸೋತರೂ ಅವರ ಜನಪ್ರಿಯತೆ ಇನ್ನಷ್ಟು ಹೆಚ್ಚಿತು. 92ರ ಇಳಿವಯಸ್ಸಿನಲ್ಲೂ ಅವರು ಕಾನ್ಪುರದ ತಮ್ಮ ಕ್ಲಿನಿಕ್‌ನಲ್ಲಿ ಕುಳಿತು ರೋಗಿಗಳ ಸೇವೆಯಲ್ಲಿ ನಿರತರಾಗಿದ್ದರು. ಮೊದಲ ಮಗಳು ಸುಹಾಸಿನಿ ಅಲಿ ಸಿಪಿಎಂ ಮುಂದಾಳು. (ಇನ್ನೊಬ್ಬಾಕೆ ಅನಿಶಾ ಪುರಿ) ಮೊಮ್ಮಗ ಶಾದ್ ಅಲಿ ಸಿನಿಮಾ ನಿರ್ಮಾಪಕ. ಸೋದರಿ ಮೃಣಾಲಿನಿ ಸಾರಾಭಾಯಿ. ಇಡೀ ಕುಟುಂಬ ಸಾಮಾಜಿಕ ಚಳವಳಿಯಲ್ಲಿ ಸದಾ ಸಕ್ರಿಯ.



# ಮೈಕೆಲ್‌ಗೆ ಎಷ್ಟು ಚಿನ್ನ?

ಅಮೆರಿಕದ ಈ ಈಜುಗಾರನಿಗೆ ಚಿನ್ನದ ದಾಹ! ಮೈಕೆಲ್ ಫೆಲ್ಪ್ಸ್ ಈ ಸಲ ಲಂಡನ್ ಒಲಿಂಪಿಕ್ಸ್‌ನಲ್ಲಿ ಇನ್ನೆಷ್ಟು ಚಿನ್ನ ದೋಚಲಿದ್ದಾರೆ ಎನ್ನುವ ಕುತೂಹಲ ಎಲ್ಲರಿಗೂ.

ತನ್ನ 15ರ ಹರೆಯದಲ್ಲೇ ಮೊದಲ ಬಾರಿಗೆ ಸಿಡ್ನಿಯಲ್ಲಿ ಒಲಿಂಪಿಕ್ಸ್ ಈಜುಕೊಳಕ್ಕೆ ಇಳಿದವನೀತ. ಆದರೆ ಅವತ್ತು ಚಿನ್ನ ಸಿಗಲಿಲ್ಲ. ಆರು ತಿಂಗಳ ಬಳಿಕ 200 ಮೀಟರ್ ಬಟರ್‌ಫ್ಲೈನಲ್ಲಿ ವಿಶ್ವದಾಖಲೆ ಮಾಡಿದಾಗ ಜಗತ್ತು ಈತನೆಡೆಗೆ ತಿರುಗಿ ನೋಡಿತು. ಅಲ್ಲಿಂದೀಚೆಗೆ ಈತ ಹಿಂತಿರುಗಿ ನೋಡಲಿಲ್ಲ. 2004ರಲ್ಲಿ ಅಥೆನ್ಸ್ ಒಲಿಂಪಿಕ್ಸ್‌ನಲ್ಲಿ ಈ ಮೈಕೆಲ್ ಆರು ಚಿನ್ನ ಮತ್ತು ಎರಡು ಕಂಚುಗಳನ್ನು ಗೆದ್ದ! ಆ ಬಳಿಕ 2008ರಲ್ಲಿ ಬೀಜಿಂಗ್ ಒಲಿಂಪಿಕ್ಸ್‌ನಲ್ಲಿ ಎಂಟು ಚಿನ್ನದ ಪದಕಗಳನ್ನು ಗೆದ್ದ! ಅವತ್ತು 100 ಮೀ, 200 ಮೀ ಬಟರ್ ಫ್ಲೈ, 200 ಮೀ, 400 ಮೀ ವೈಯಕ್ತಿಕ ಮೆಡ್ಲೇ, 4–200 ಮೀ ಫ್ರೀಸ್ಟೈಲ್ ಮತ್ತು 4–100 ಮೀ ಮೆಡ್ಲೇ ರಿಲೇ– ಹೀಗೆ ಎಲ್ಲ ವಿಭಾಗಗಳಲ್ಲೂ ವಿಶ್ವದಾಖಲೆಯ ಜತೆಗೆ ಚಿನ್ನ ಗೆದ್ದಾಗ ಇಡೀ ವಿಶ್ವವೇ ರೋಮಾಂಚನಗೊಂಡಿತು.

ಮೈಕೆಲ್ ಬಳಿ ಈಗ ಒಟ್ಟು 14 ಒಲಿಂಪಿಕ್ಸ್ ಚಿನ್ನ ಮತ್ತು ಎರಡು ಕಂಚಿನ ಪದಕಗಳಿವೆ. ಸದ್ಯಕ್ಕೆ ಅತ್ಯಧಿಕ ಎಂದರೆ, ಮೂರು ಒಲಿಂಪಿಕ್ಸ್‌ಗಳಲ್ಲಿ ಒಟ್ಟು 18 ಚಿನ್ನಗಳನ್ನು ಗೆದ್ದಿರುವ ವಿಶ್ವದಾಖಲೆ ಸೋವಿಯತ್‌ನ ಜಿಮ್ನಾಸ್ಟ್, ಲಾರಿಸಾ ಲ್ಯಾಟಿನಿನಾ ಹೆಸರಲ್ಲಿದೆ. ಈ ಸಲ ಲಂಡನ್‌ನಲ್ಲಿ ಮೈಕೆಲ್ ಈ ದಾಖಲೆಯನ್ನು ಮುರಿಯಬಹುದೆ? 72ರ ಮ್ಯೂನಿಚ್ ಒಲಿಂಪಿಕ್ಸ್‌ನಲ್ಲಿ ಅಮೆರಿಕದ ಈಜುಗಾರ ಮಾರ್ಕ್ ಸ್ಪಿಟ್ಜ್, ಒಮ್ಮೆಗೆ 7 ಚಿನ್ನ ಮತ್ತು ಒಂದು ಕಂಚು ಗೆದ್ದಿದ್ದ. ಆ ದಾಖಲೆಯನ್ನೂ ಮೈಕೆಲ್ ಈ ಸಲ ಮುರಿಯಬಹುದೆ? ಆತನ ಅಭಿಮಾನಿಗಳಂತೂ 'ಗ್ಯಾರಂಟಿ' ಎನ್ನುತ್ತಿದ್ದಾರೆ!

Printed and Published by S.V. Srinivasan on behalf of The Printers (Mysore) Private Ltd. Printed at Rajhans Enterprises, No.134, 4th Main Road, Industrial Town, Rajajinagar, Bangalore- 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bangalore - 560074. Editor: K.N. TILAK KUMAR.
Editorial Office: 75, M.G Road, Bangalore-560 001 E-mail:editorsu@sudha.co.in. Phone: 2588 0000, Fax: 25880618, Editorial:25880619, Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65